# ವ್ಯವಸ್ಥಿತ ಕೃಷಿ; ಯುವಕರ ದಿಟ್ಟ ಹೆಜ್ಜೆ



ಬೇಸಾಯ ಬಿಟ್ಟು ಸಿಟಿ ಬಸ್ಸು ಹತ್ತಿದ್ದ ಬಹುತೇಕರು ಕೋವಿಡ್ ಬಂದಾಗ ಹಾಗೂ ಅದರ ನಂತರದ ಅವಧಿಯಲ್ಲಿ ಕೃಷಿಯತ್ತ ವಾಲಿದ್ದು, ಅಪ್ಪನೊಂದಿಗೆ ಕೃಷಿ ಬದುಕಿಗೆ ಕಾಲಿಟ್ಟ ನನ್ನಲ್ಲಿ ಬೆರಗು ಮೂಡಿಸಿತು. ಕೃಷಿಯೇ ನಮ್ಮೆಲ್ಲರ ಮೂಲ ಕಸುಬು ಎನ್ನುವುದನ್ನು ಈ ಬದಲಾವಣೆಯ ಪರ್ವ ಸೂಕ್ಷ್ಮವಾಗಿ ಬಡಿದೆಚ್ಚರಿಸುವಂತಿತ್ತು. ಹೀಗೆ ಮರಳಿ ಬೇಸಾಯಕ್ಕೆ ಬಂದವರಲ್ಲಿ ಬಹುತೇಕರು ಯುವಕರೇ ಎಂಬುದೂ ಗಮನಾರ್ಹ ಸಂಗತಿ.



ಸಾಂಪ್ರದಾಯಿಕ ಕೃಷಿಗೆ ಒಗ್ಗಿಕೊಳ್ಳದ ಯುವ ಸಮೂಹ ಕೃಷಿಯಲ್ಲಿ ಹಲವಾರು ಪ್ರಯೋಗಗಳಿಗೆ ಕೈ ಹಾಕುತ್ತಿದೆ. ಲಾಭ ನಷ್ಟದ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳದ ಯುವ ಕೃಷಿಕರು ಅಂದುಕೊಂಡದ್ದನ್ನು ಉತ್ಕೃಷ್ಟವಾಗಿ ಬೆಳೆಯಲು ಸವಾಲುಗಳನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ. ಕೂತಲ್ಲೇ ತಮ್ಮ ಸುತ್ತಮುತ್ತಲ ಕೃಷಿ ಮಾರುಕಟ್ಟೆಯ ಸ್ಥಿತಿಗತಿಯನ್ನು ಅವಲೋಕಿಸಿ, ಲೆಕ್ಕಾಚಾರ ಮಾಡಿ ಬೆಳೆ ನಾಟಿ ಮಾಡಿ ಯಶ ಕಾಣುತ್ತಿದ್ದಾರೆ.

ಬೆಳೆಯ ಬೆಳವಣಿಗೆಯನ್ನು ಕಾಲಕಾಲಕ್ಕೆ ಅವಲೋಕಿಸುವ ಈ ಯುವ ಕೃಷಿಕರು, ರೋಗಗಳಿಗೆ ಹತ್ತಾರು ಕಡೆಯಿಂದ ಮಾಹಿತಿಯನ್ನು ಪಡೆದು ಅಗತ್ಯ ರಾಸಾಯನಿಕ ಸಿಂಪಡಣೆ ಮಾಡಿ ಉತ್ಕೃಷ್ಟ ಬೆಳೆ ಬೆಳೆಯುತ್ತಿದ್ದಾರೆ. ಈ ಮನಸ್ಥಿತಿಯಿಂದ ನಾನೂ ಹೊರತಲ್ಲ. ಕಳೆದ ಕೆಲ ವರ್ಷಗಳ ಮಾರುಕಟ್ಟೆಯ ಸ್ಥಿತಿಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಮುಂದಿನ ಬೇಸಾಯಕ್ಕೆ ಭೂಮಿ ಅಣಿಮಾಡುವುದು ನನ್ನ ಕೃಷಿ ಕ್ರಮ. ಋತುಮಾನಕ್ಕೆ ಅನುಗುಣವಾದ ಬೇಸಾಯ ನನ್ನ ಆದ್ಯತೆ.

ಸರಳ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು ಯುವ ಕೃಷಿಕರಿಗೆ 'ತಂತ್ರಜ್ಞಾನ ಆಧರಿತ ಕೃಷಿ' ಹೊಸ ಮಾರ್ಗೋಪಾಯ. ಸ್ಮಾರ್ಟ್‌ಫೋನ್‌ಗಳು ಕೃಷಿ ತಂತ್ರಜ್ಞಾನದ ಅಲ್ಪಸ್ವಲ್ಪ ಅರಿವನ್ನು ಪದ್ಧತಿಗಳನ್ನು ಸರಿಹೊಂದಿಸಬಹುದು. ಬೆಳೆಗಳಿಗೆ ಅಗತ್ಯವಿದ್ದಷ್ಟೇ ನೀರುಣಿಸಿ, ಉತ್ತಮ ಇಳುವರಿ ಪಡೆಯಲು ಇದು ಸಹಕಾರಿ.

## ನಿಖರ ಕೃಷಿ ತಂತ್ರಜ್ಞಾನ

ಹವಾಮಾನ ವೈಪರೀತ್ಯ ಹೆಚ್ಚುತ್ತಿರುವ ಈ ಸಂದಿಗ್ಧ ಸ್ಥಿತಿಯಲ್ಲಿ ನಿಖರವಾಗಿ ಕೃಷಿ ಮಾಡುವುದು ಅತ್ಯವಶ್ಯ. ಇದಕ್ಕಾಗಿ ಜನರು ತಂತ್ರಜ್ಞಾನದ ಮೊರೆಹೋಗುತ್ತಿರುವುದು ಒಳ್ಳೆಯ ಬೆಳವಣಿಗೆಯಾದರೂ ಸಾಕಷ್ಟು ಮಂದಿ ಹಿಂದುಳಿಯುತ್ತಿರುವುದು ಅರಿವಿನ ಕೊರತೆಯನ್ನು ತೋರುತ್ತದೆ. ಜಿಪಿಎಸ್ ತಂತ್ರಜ್ಞಾನ ಆಧರಿತ ನಿಖರ ಕೃಷಿಯಲ್ಲಿ (precision farming) ವ್ಯಾಪಕವಾಗಿ ಬಳಸಲಾಗುತ್ತದೆ. ಇದು ಉತ್ತಮ ಬೆಳವಣಿಗೆ. ರಸಗೊಬ್ಬರಗಳು, ಕೀಟನಾಶಕಗಳನ್ನು ಸರಿಯಾಗಿ ಬೆಳೆಗಳಿಗೆ ಒದಗಿಸಲು ನೆರವಾಗುವ ಈ ತಂತ್ರಜ್ಞಾನವು ಕೃಷಿಯಲ್ಲಾಗುವ ಪೋಲನ್ನು ಗಣನೀಯವಾಗಿ ಕಡಿಮೆ ಮಾಡಿ, ದಕ್ಷತೆ ಹೆಚ್ಚಿಸುತ್ತದೆ.

## ಹವಾಮಾನ ಮಾಹಿತಿ

ಅತ್ಯಾಧುನಿಕ ಸ್ಮಾರ್ಟ್‌ಫೋನ್‌ಗಳು ರೈತರ ಕಿಸೆಗೆ ಸೇರಿದ ಮೇಲಂತೂ ಆಯಾ ಸಮಯದ (real time) ಹವಾಮಾನ ಮಾಹಿತಿಯು ಅವರಿಗೆ ಸುಲಭವಾಗಿ ತಲುಪುತ್ತಿದೆ. ಈ ದತ್ತಾಂಶದಿಂದ ಯಾವಾಗ ಬಿತ್ತನೆ ಮಾಡಬೇಕು, ಹೇಗೆ ನೀರು ಹರಿಸಬೇಕು ಮತ್ತು ಯಾವ ರೀತಿಯ ಬೆಳೆ ಬೆಳೆಯಬೇಕು ಎಂಬಿತ್ಯಾದಿ ಮಾಹಿತಿಯನ್ನು ಇದು ಒದಗಿಸುತ್ತದೆ. ಈ ಮಾಹಿತಿಯನ್ನು ಹವಾಮಾನ ಅಪ್ಲಿಕೇಶನ್‌ಗಳು ಅಥವಾ ವೆಬ್‌ಸೈಟ್‌ಗಳ ಮೂಲಕ ಅಥವಾ ಜಮೀನಿನಲ್ಲಿ ಮೀಸಲಾದ ಹವಾಮಾನ ಕೇಂದ್ರಗಳ ಮೂಲಕ ಪಡೆಯಬಹುದು.

## ಯಾಂತ್ರೀಕೃತಗೊಳಿಸುವಿಕೆ

ಕೃಷಿ ಆಟೊಮೇಷನ್ ಸಹ ತಂತ್ರಜ್ಞಾನದ ಭಾಗ. ಕಾರ್ಮಿಕರ ಕೊರತೆಯ ಸಮಸ್ಯೆಯನ್ನು ಹಾಗೂ ದೈಹಿಕ ಶ್ರಮವನ್ನು ಕಡಿಮೆ ಮಾಡಿರುವ ಕೃಷಿ ಆಟೊಮೇಷನ್, ಉಳುಮೆ, ಬಿತ್ತನೆ, ನಾಟಿ, ಕೊಯ್ಲು ಮುಂತಾದ ಕೃಷಿ ಪ್ರಕ್ರಿಯೆಗಳನ್ನು ಯಾಂತ್ರೀಕೃತ ಆಗಿಸಿ, ಸರಳ ಕೃಷಿಯ ಹೊಸ ಸಾಧ್ಯತೆಯನ್ನು ಪರಿಚಯಿಸುತ್ತಲೇ ಸಾಗಿದೆ.

## ಡ್ರೋನ್‌ಗಳು

ದೇಶದ ಮೂಲೆ ಮೂಲೆಯಲ್ಲೂ ಹರಡಿರುವ ಕೃಷಿ ಚಟುವಟಿಕೆಯ ದತ್ತಾಂಶ ಸಂಗ್ರಹಣೆಯು ಬಹುದೊಡ್ಡ ಸವಾಲು. ಕೃಷಿ ಚಟುವಟಿಕೆಯ ಮ್ಯಾಪಿಂಗ್, ಸಮೀಕ್ಷೆ ಮತ್ತು ಬೆಳೆ ಮೇಲ್ವಿಚಾರಣೆ ಮಾಡಿ, ದತ್ತಾಂಶ ಸಂಗ್ರಹಣೆಗೆ ಡ್ರೋನ್‌ಗಳು ಬಹು ಉಪಕಾರಿಯಾಗಿವೆ. ಕೃಷಿ ಚಟುವಟಿಕೆಗಳ ಯೋಜನೆ ಮತ್ತು ಕಾರ್ಯಗತಗೊಳಿಸುವಿಕೆಗಾಗಿ ಬಳಸಬಹುದಾದ ದತ್ತಾಂಶವನ್ನು ಸಂಗ್ರಹಿಸಲು ಇವು ಸಹಾಯ ಮಾಡುತ್ತಿವೆ. ಕುಗ್ರಾಮಗಳನ್ನೂ ಇವು ತಲುಪುತ್ತಿರುವುದು ಗಮನಾರ್ಹ.

